ಅಧ್ಯಕ್ಷರು ಪ್ರಸ್ತಾವ ಏನೆಂದರೆ : "ಖಂಡ 2ರಿಂದ 4ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 4ರವರೆಗೆ, ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ " ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘಶೀರ್ಷಿಕೆ, ಪ್ರಸ್ತಾವನೆ, ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವ ಅಂಗೀಕಾರ

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ರ ಕರ್ನಾಟಕ ಗ್ರಾಮ ರಕ್ಷಣಾ ದಳಗಳ (ನಿರಶನ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ " ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ರ ಕರ್ನಾಟಕ ಗ್ರಾಮ ರಕ್ಷಣಾ ದಳಗಳ (ನಿರಶನ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮಂತ್ರಿಗಳು) : ಮಾನ್ಯ ಮುಖ್ಯಮಂತ್ರಿಗಳು ಇನ್ನು ಹತ್ತು ನಿಮಿಷದಲ್ಲಿ ಬರುತ್ತಾರೆ. mean while ಮಾನ್ಯ ಸಹಕಾರ ಮಂತ್ರಿಗಳು ಒಂದು ಸಣ್ಣ ಜೆಲ್‌ನ್ನು ತಂದಿದ್ದಾರೆ. ಮತ್ತು ಮಾನ್ಯ ಅಬ್ಕಾರಿ ಸಚಿವರು ಒಂದು ಬಿಲ್ ಕೂಡ ಮೇಲ್ಮನೆಯಲ್ಲಿ ಪಾಸಾಗಿ ಬಂದಿದೆ, ಅದನ್ನಾದರೂ ತೆಗೆದುಕೊಳ್ಳಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ನಾಳೆ ಮಾಡೋಣ ಬಿಡಿ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರಂತೆ. ಕಾಕಂಬಿಯಿದು ಒಂದನ್ನು ಮಾಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಹೇಳಿಕಳುಹಿಸಿದ್ದೇವೆ, ಮಾನ್ಯ ಮುಖ್ಯಮಂತ್ರಿಗಳು ಇನ್ನು ಹತ್ತು ನಿಮಿಷದಲ್ಲಿ ಬರುತ್ತೇನೆಂದು ಹೇಳಿದ್ದಾರೆ. ಅವರು ಬರುವವರೆಗೆ ಒಂದಾದರೂ ತೆಗೆದುಕೊಳ್ಳೋಣ.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(2) ಕರ್ನಾಟಕ ಕಾಕಂಬಿ ನಿಯಂತ್ರಣ ವಿಧೇಯಕ, 2004

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ಎಂ. ನಾಣಯ್ಯ (ಅಬ್ಕಾರಿ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) ಮಾನ್ಯ ಅಧ್ಯಕ್ಷರೇ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿ 2004ರ ಕರ್ನಾಟಕ ಕಾಕಂಬಿ ನಿಯಂತ್ರಣ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಶ್ರೀ ಎಂ.ಎಂ. ನಾಣಯ್ಯ (ಅಬ್ಕಾರಿ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಕಾಕಂಬಿಯು ಸಕ್ಕರೆ ಕಾರ್ಖಾನೆಯ ಒಂದು ಉಪ ಉತ್ಪನ್ನವಾಗಿದ್ದು ಇದು ರಾಜ್ಯದಲ್ಲಿ rectified spirit ಉತ್ಪಾದನೆಗಾಗಿ ಪ್ರಾಥಮಿಕ ಭಟ್ಟಿ ಕಾರ್ಖಾನೆಗಳು ಮತ್ತು ದೇಶೀಯ ಮದ್ಯ ಉತ್ಪಾದನೆಗಾಗಿ blending ಭಟ್ಟಿ ಕಾರ್ಖಾನೆಗಳಿಗೆ ಬಳಸುತ್ತೇವೆ. ಇದರಲ್ಲಿ ಕಾಕಂಬಿಯನ್ನು ನಿಯಂತ್ರಣ ಮಾಡುವ ವ್ಯವಸ್ಥೆ ಏನು ಇತ್ತು, ಅದು ಕೇಂದ್ರಸರ್ಕಾರದ ಕಾಯ್ದೆಯಲ್ಲಿತ್ತು ಅದನ್ನು 1992ರಲ್ಲಿ ರದ್ದುಪಡಿಸಿದ ನಂತರ ಈ ಕಾಕಂಬಿಯನ್ನು ಕಂಟ್ರೋಲ್ ಮಾಡುವಂಥ ಒಂದು ಅಧಿಕಾರ ರಾಜ್ಯಸರ್ಕಾರದ ಕೈಯಲ್ಲಿರಲಿಲ್ಲ. ಹಾಗಾಗಿ ಕಾಕಂಬಿಯನ್ನು ಹೊರಗಡೆ ಕಳುಹಿಸುವುದಕ್ಕಾಗಲಿ, ಆಮದು ಮಾಡುವುದಕ್ಕಾಗಿ ರಫ್ತು ಮಾಡುವುದಕ್ಕಾಗಿ ರಫ್ತು ಮಾಡುವುದಕ್ಕಾಗಲಿ ಮತ್ತು ರಾಜ್ಯದೊಳಗಡೆ ಎಲ್ಲಾದರು ವಿತರಣೆ ಮಾಡುವುದಕ್ಕಾಗಲಿ, ನಮ್ಮ ಇಲಾಖೆಯಿಂದ ಪರ್ಮಿಟ್ ಕೊಡುವ ಅಧಿಕಾರವನ್ನು ರಾಜ್ಯಸರ್ಕಾರ ಅವರಿಗೆ ಕೊಟ್ಟಿಲ್ಲವೆಂದು ಹೇಳಿ ಒಂದು ದೊಡ್ಡ ಆಪಾದನೆ ಇತ್ತು ಮತ್ತು ಹೈಕೋರ್ಟಿನಲ್ಲಿ ಕೂಡ ಇದರ ಬಗ್ಗೆ ಛಾಲೆಂಜ್ ಮಾಡಿದ್ದಾರೆ ಹಾಗಾಗಿ ಸರ್ಕಾರಕ್ಕೆ ಒಂದು ಅಧಿಕಾರ ಕೊಡುವಂಥ ದಿಸೆಯಲ್ಲಿ ಇದನ್ನು ನಾವು ತಂದಿದ್ದೇವೆ. ಈ ಕಾಕಂಬಿಯನ್ನು ಏನು ಸಕ್ಕರೆ ಕಾರ್ಖಾನೆಗಳು ಉತ್ಪಾದನೆಯನ್ನು ಮಾಡುತ್ತವೆ, ಅದನ್ನು ಸ್ಟೋರ್ ಮಾಡುವುದು, ವಿತರಣೆ ಮಾಡುವುದು ಮತ್ತು ಅದನ್ನು ಹೊರಗಡೆ ಕೊಡುವಾಗ ಅದಕ್ಕೆ ಪರ್ಮಿಟ್ ಕೊಡುವುದು ಮತ್ತು ಆಮದು ಮಾಡುವುದಕ್ಕೆ ಪರ್ಮಿಟ್ ಕೊಡುವುದನ್ನು ಮತ್ತು ರಾಜ್ಯದೊಳಗಡೆ ವಿತರಣೆ ಮಾಡುವಾಗ ರೆಕ್ಟಿಫೈಡ್ ಸ್ಪಿರಿಟ್‌ನ್ನು ಕೊಡುವಾಗ ಅದನ್ನು ಅರ್ಮಾಕ್ ಮ್ಯಾನ್ಯುಫ್ಯಾಕ್ಚರಿಂಗ್ ಮತ್ತು ಈ ಕೆಮಿಕಲ್ ಇಂಡಸ್ಟ್ರಿಸ್‌ಗೆ fruit products ಮತ್ತು ಕ್ಯಾಟಲ್ ಫೀಡ್ ಅಥವಾ ಪೌಲ್ಟ್ರಿಗೆ ಕೊಡುವಾಗ ಪರ್ಮಿಟ್‌ನ್ನು ಕೊಡಬೇಕಾಗುತ್ತದೆ. ಸಕ್ಕರೆ ಫ್ಯಾಕ್ಟರಿಗಳವರಿಗೂ ಮತ್ತು ಇಲಾಖೆಯವರಿಗೂ ಅನೇಕಸಾರಿ ವಾಗ್ವಾದ ಬಂದಿದೆ. ಇದಕ್ಕೆ ಕಂಟ್ರೋಲ್ ಆರ್ಡರ್ ಇಲ್ಲ, ನೀವ್ಯಾಕೆ ಲೈಸೆನ್ಸ್ ಕೊಡುತ್ತೀರಿ ಎಂದು ಹೇಳಿ. ಇದೆಲ್ಲವನ್ನೂ ಇತ್ಯರ್ಥ ಮಾಡುವುದಕ್ಕಾಗಿ ಯಾವುದೇ ಯಾವುದೇ ರೀತಿ ದ್ವಂದ್ವ ಬರದ ರೀತಿಯಲ್ಲಿ ಕಾಪಾಡಲಿಕ್ಕಾಗಿ ಮತ್ತು ಅಧಿಕಾರಯುತವಾಗಿ ಅಧಿಕಾರವನ್ನು ಕೊಡುವುದಕ್ಕಾಗಿ ಇಲಾಖೆಗೆ ಈ ಒಂದು ತಿದ್ದುಪಡಿ ಅವಶ್ಯಕತೆ ಇದೆ, ಕಾನೂನು ಅವಶ್ಯಕತೆ ಇದೆ. ಮತ್ತು ನಿಯಮಗಳು ಅವಶ್ಯಕತೆ ಇದೆ. ಅದಕ್ಕಾಗಿ ಒಂದು ತಿದ್ದುಪಡಿಯನ್ನು ತಂದು ನಮ್ಮ ರಾಜ್ಯಕ್ಕೆ ಈ ಒಂದು ಅಧಿಕಾರವನ್ನು ಇಟ್ಟುಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೇ, ಇದು ಅಗತ್ಯ ಇದೆ. ಆದರೆ ಈ ಕಾಕಂಬಿಯ ವಿತರಣೆಯಲ್ಲಿ ಯಾವ ಸಕ್ಕರೆ ಕಾರ್ಖಾನೆಗಳಲ್ಲಿ ಎಷ್ಟು ಉತ್ಪಾದನೆಯಾಗಿದೆ, ಅದನ್ನು ನೀವು ಬಿವರೇಜ್ ಕಾಮೋರೇಷ್ ಮುಖಾಂತರ ಡಿಸ್ಟಿಬ್ಯೂಷನ್ ಮಾಡಲಿಕ್ಕೆ ಶುರುಮಾಡಿದರೆ ಒಂದು ಸಕ್ಕರೆ ಕಾರ್ಖಾನೆಯಲ್ಲಿ ಒಂದು ಟನ್‌ಗೆ ಒಂದು ಸಾವಿರ ರೂ. ರೀತಿ ಮಾರುತ್ತಾರೆ. ಇನ್ನೊಂದು ಸಕ್ಕರೆ ಕಾರ್ಖಾನೆಯಲ್ಲಿ ಎರಡು ಸಾವಿರ ರೂ ಗೆ ಮಾರುತ್ತಾರೆ. ಅದು ಎಲ್ಲಿಗೆ ಹೋಗುತ್ತದೆಂದರೆ ಈ ಇಲಿಸಿಟ್ ಲಿಕ್ಕರ್ ಬಗ್ಗೆ ಏನು ಸೆಕೆಂಟ್ಸ್ ಅರ್ಮಾಕ್ ಬಗ್ಗೆ ಮಾತನಾಡಿದರು, ಫೀಡ್ಸ್‌ಗೆ ಎಂದು ಸಫ್ಲೈ ತೆಗೆದುಕೊಂಡು ಹೋಗುವುದು ಅದು ಇಲಿಸಿಟ್ ಲಿಕ್ಕರ್ ಮ್ಯಾನ್ಯುಫಾಕ್ಚರಿಂಗ್‌ಗೆ ಹೋಗುತ್ತಿದೆ. ಅದಕ್ಕೋಸ್ಕರ ತಾವು ಒಂದು ವ್ಯವಸ್ಥೆಯನ್ನು ಮಾಡಿ ಕೇವಲ ಇಷ್ಟನ್ನು ಮಾಡಿದರೆ ಸಾಕಾಗುವುದಿಲ್ಲ. ಸಕ್ಕರೆ ಕಾರ್ಖಾನೆಗಳಲ್ಲಿ ಎಷ್ಟು ಕಾಕಂಬಿ ಉತ್ಪಾದನೆಯಾಗುತ್ತದೆ, ಅದನ್ನು ಯಾವುದಕ್ಕೆ ಸಪ್ಲೈ ಮಾಡುತ್ತಾರೆ ನೀವು ಪರ್ಮಿಟನ್ನು ಕೊಡುವಾಗ, ಎಲ್ಲಿ ಫೀಡ್ ಮ್ಯಾನ್ಯುಫ್ಯಾಕ್ಚರ್ ಮಾಡುವಾಗ ಮಾಡುತ್ತಾರೆ, ಅಲ್ಲಿ ಎಷ್ಟು ಉತ್ಪಾದನೆಯಾಗಿದೆ. ಅದರಿಂದ ಪ್ರೋಡಕ್ಟ್ಸ್, ಇವೆಲ್ಲವನ್ನೂ ಲೆಕ್ಕಹಾಕಿ ಅದೆನ್ನು ಸಾವು ನೇರವಾಗಿ ಕ್ಯಾಟಲ್ ಫೀಡ್‌ಗೆ ಕೊಡುವಂಥದ್ದು, ಅವರು ಕ್ಯಾಟಲ್ ಫೀಡ್ ಮ್ಯಾನ್ಯುಫ್ಯಾಕ್ಚರ್ ಮಾಡದೆ ಅದು

ಇಲಿಸಿಟ್ ಸಾರಾಯಿ ಮ್ಯಾನ್ಯುಫ್ಯಾಕ್ಚರಿಂಗ್‌ಗೆ ಹೋಗುತ್ತದೆ. ಅದನ್ನೆಲ್ಲಾ ಮಾಡದೆ ಕೇವಲ ಇದನ್ನು ನೀವು ಹತೋಟಿಯನ್ನು ತೆಗೆದುಕೊಂಡು ವಿತರಣೆಯನ್ನು ಪರಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ದಯವಿಟ್ಟು ನೀವು ಅದರ ವಿತರಣೆಯಲ್ಲಿ ಎಲ್ಲಿ ಎಷ್ಟು ಹೋಗಿದೆ, ಎಷ್ಟು ಉತ್ಪಾದನೆಯಾಗಿದೆ, ಇವೆಲ್ಲವನ್ನೂ ಮಾಡಬೇಕಾಗುತ್ತದೆ through ಪ್ರಿವರೇಜ್ ಕಾರ್ಪೊರೇಷನ್ ಮುಖಾಂತರ ಮಾಡಿದರೆ ಮಾತ್ರ ಲಾಭವಾಗುತ್ತದೆ. ಕೇವಲ ಈ ಒಂದು ಕಾನೂನನ್ನು ತಂದರೆ ಏನೂ ಸಾಕಾಗುವುದಿಲ್ಲ. ಮತ್ತೆ ಕಾರ್ಖಾನೆಗಳಲ್ಲಿ ಏನು ಮಾರಾಟ ಮಾಡುತ್ತಾರೆ, ಅದನ್ನು ಎಲ್ಲಾ ಕಾರ್ಖಾನೆಗಳಿಗೂ ಒಂದೇ ರೇಟ್‌ನಲ್ಲಿ ಮಾರಾಟ ಮಾಡಿದರೆ ನಾವು ಒಪ್ಪುತ್ತೇವೆ. ಒಂದು ಕಾರ್ಖಾನೆಯಲ್ಲಿ ಒಂದು ಸಾವಿರ ರೂ.ಗೆ ಮಾರುವುದು, ಇನ್ನೊಂದು ಕಾರ್ಖಾನೆಯನ್ನು 500 ರೂಗೆ ಮಾರುವುದು. ಇದರ ಮತ್ಯಾಸ ಏಕೆ ಬರುತ್ತದೆಂದು ಸರ್ಕಾರ ಸ್ವಲ್ಪ ಗಮನವನ್ನು ಹರಿಸಿದರೆ ಕಾರ್ಖಾನೆಗಳೇ ಇದನ್ನು ಅಂಡರ್ ಹ್ಯಾಂಡ್ ಡೀಲ್ ಮಾಡುತ್ತಿದ್ದಾರೆ. ದಯವಿಟ್ಟು ಇದನ್ನು ಹತೋಟಿಗೆ ತನ್ನಿ ಎಂದು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸ ಗೌಡ ಕುಮುವನಹಳ್ಳಿ (ಕೋಲಾರ) : ಮಾನ್ಯ ಅಧ್ಯಕ್ಷರೇ, ನಮ್ಮ ಸಹಕಾರ ಮಂತ್ರಿಗಳಿಗೆ ಚೆನ್ನಾಗಿ ಗೊತ್ತು ನಾವು ಕೆಲವು ಸಹಕಾರ ಸಂಘಗಳನ್ನು ಒಂದು ಹ್ಯಾಂಡ್‌ಬ್ಯಾಗ್‌ನಲ್ಲೇ ಇಟ್ಟಿರುತ್ತೇವೆ. ಹೋಲ್ ಸಹಕಾರ ಸಂಘಗಳೇ ಒಂದು ಹ್ಯಾಂಡ್‌ಬ್ಯಾಗ್‌ನಲ್ಲಿರುತ್ತದೆ. ಆ ತರಹ ಈ ಪಶು ಆಹಾರ ತಯಾರಿಕಾ ಕಂಪನಿಗಳೂ ಕೂಡ ಒಂದು ಹ್ಯಾಂಡ್ ಬ್ಯಾಗ್‌ನಲ್ಲಿವೆ. ಕಾರಣವೇನೆಂದರೆ, ಈ ಕಾಕಂಬಿ ಒಂದು ಮೆಟ್ರಿಕ್ ಟನ್‌ಗೆ 200 ರಿಂದ 300 ಲೀಟರ್ ಮದ್ಯಸಾರ ತಯಾರಾಗುತ್ತದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇವರು ಒಂದು ಲೀಟರ್‌ಗೆ ಅಂದರೆ ಆ ಮದ್ಯಸಾರ ಆಗುವುದು ಸ್ಪಿರಿಟ್ ಒಂದು ಲೀಟರ್‌ಗೆ 24 ರೂ. ಆಗುತ್ತದೆ. ಇದನ್ನು ಒಂದು ಸಾವಿರ ಟನ್ ಖರೀದಿಸಿದರೆ ಎರಡರಿಂದ ಮೂರು ಲಕ್ಷ ಲೀಟರ್ ಮದ್ಯಸಾರ ಎಂದರೆ ಸ್ಪಿರಿಟ್ ಸಕ್ಕರೆ ಕಾರ್ಖಾನೆಯಿಂದ ಎರಡೂವರೆ ಸಾವಿರ ಟನ್ ಕಾಕಂಬಿಗೆ ಉಪಯೋಗ ಮಾಡುತ್ತಾರೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇಲ್ಲಿ ಯಾವ ಸ್ಪಿರಿಟ್ ಮಾಡುವ ಕಂಪನಿಗಳಿಗೆ ಕೊಡುತ್ತಾರೆ, ಆ ಕಂಪನಿಗಳಿಗೆ ಕೊಡದೆ ಇದು ಸುತ್ತುಹಾಕಿಕೊಂಡು ಏನು ಪಶು ಆಹಾರ ತಯಾರಿಕಾ ಕಂಪನಿಗಳಿಂದ ಇದನ್ನು ಕೊಡುವುದರ ಮೂಲಕ ಬಹಳಷ್ಟು ನಷ್ಟವಾಗುತ್ತದೆ. ಸಕ್ಕರೆ ಕಾರ್ಖಾನೆಗಳಿಗೂ ಕೂಡ ನೀವು ನಷ್ಟ ಮಾಡಿ ಇದನ್ನು ನೇರವಾಗಿ ಅವರು ಈ ಸ್ಪಿರಿಟ್ ಮಾಡುವಂಥ ಕಂಪನಿಗಳಿಗೆ ಮಾರುತ್ತಾರೆ. ಇದನ್ನು ನಿಲ್ಲಿಸುವುದರ ಬಗ್ಗೆ ಯೋಚನೆ ಮಾಡಬೇಕು. ಅದನ್ನು ಬಿಟ್ಟು ಇವರು ನೇರವಾಗಿ ಏನು ಸಕ್ಕರೆ ಕಾರ್ಖಾನೆಗಳಿಂದ ಕೊಳ್ಳುವುದನ್ನು ಯಾವ ತರಹ ಕಂಟ್ರೋಲ್ ಮಾಡುತ್ತೀರಿ ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ನಾನು ಯಾವ ರೀತಿ ಹೇಳುತ್ತಿದ್ದೇನೆಂದರೆ ಬರೀ ಪಶು ತಯಾರಿಕೆಯಲ್ಲಿ ಒಂದು ಲೆಟರ್‌ಹೆಡ್‌ನಲ್ಲಿ ಮಾತ್ರ ಅದು ಸೇಲ್ ಆಗುತ್ತದೆ. ಆದರೆ ಅದು ನೇರವಾಗಿ ಈ ಸ್ಪಿರಿಟ್ ಕಂಪನಿಗಳಿಗೆ ಹೋಗುತ್ತದೆ. ಇದನ್ನು ನಿಲ್ಲಿಸುವಂಥದ್ದರ ಮೇಲೆ ಏನಾದರು ನೀವು ಕ್ರಮಗಳನ್ನು ಜರುಗಿಸಿದ್ದೀರಾ? ಅದಾದಮೇಲೆ ಇದು ಯಾವ ದಿಕ್ಕಿನಲ್ಲಿ ತಯಾರಾಗುತ್ತದೆ ಎನ್ನುವುದನ್ನು ದಯವಿಟ್ಟು ಮಾನ್ಯ ಮಂತ್ರಿಗಳು ಇದನ್ನು ಪಾಸು ಮಾಡಿಕೊಳ್ಳುವುದಕ್ಕೆ ಮೊದಲು ಹೇಳಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಸ್.ಎಚ್. ಮುಟ್ಟರಂಗನಾಥ್ (ಬೇಲೂರು) : ಮಾನ್ಯ ಅಧ್ಯಕ್ಷರೆ, ಇಲ್ಲಿ ತಮ್ಮ ಉದ್ದೇಶವನ್ನು ಹೇಳಿದ್ದೀರಿ. ಈ ಕಾಕಂಬಿಯನ್ನು ನಿಯಂತ್ರಣಗೊಳಿಸಬೇಕೆಂಬ ಉದ್ದೇಶವನ್ನು ಹೇಳಿದ್ದೀರಿ. ಆದರೆ ಈ ಖಂಡಸಾರಿ ಯೂನಿಟ್‌ಗಳಲ್ಲಿ ತಯಾರಾಗುತಕ್ಕಂಥ ಕಾಕಂಬಿ ಸಾಕಷ್ಟು ಪ್ರಮಾಣದಲ್ಲಿ ಭಟ್ಟಿ

ತಯಾರಿಕೆಗೆ ಹೋಗತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಹಾಗಾಗಿ ಇದು ಬಹಳ ಮಿಸ್‌ಯೂಸ್ ಆಗತಕ್ಕಂಥದ್ದು. ಇದನ್ನೂ ಕೂಡ ಅಂದರೆ ಕಾಕಂಬಿಯನ್ನೂ ಕೂಡ ಅಳವಡಿಸಬೇಕು. ಪ್ರೈವೇಟ್ ಖಂಡಸಾರಿ ಯೂನಿಟ್ಸ್‌ಗಳೇನು ಇದ್ದಾವೆ, ಆಯೂನಿಟ್ಸ್‌ನಲ್ಲಿರತಕ್ಕಂಥಹದನ್ನು ಕೂಡ ಇದರ ವ್ಯಾಪ್ತಿಯಲ್ಲಿ ತರಬೇಕು ಎನ್ನತಕ್ಕದ್ದು ನಮ್ಮ ಉದ್ದೇಶ. ಏಕೆಂದರೆ ಈಗ ತಮಗೆ ಗೊತ್ತಿರುವ ಹಾಗೆ ಅನೇಕ ಕಡೆಗಳಲ್ಲಿ ಸ್ವಂತ ಭಟ್ಟಿಯನ್ನು ಇಟ್ಟುಕೊಂಡುಬೇಕಾದಂತಹ, ವಿಸ್ಕಿ, ಜಿನ್, ರಮ್ ಇವನ್ನು ತಯಾರು ಮಾಡತಕ್ಕಂಥದ್ದು ತಮ್ಮ ಗಮನಕ್ಕೆ ಬಂದಿಲ್ಲ ಎನ್ನುವುದನ್ನು ಒಂದು ಸಾರಿ ತಮ್ಮ ಹತ್ತಿರ ಹೇಳಿದ್ದೆ. ಈ ವಿಚಾರದಲ್ಲಿ ನಾನು ತಮ್ಮ ಹತ್ತಿರ ಮಾತನಾಡಿದ್ದೆ. ಅದರ ಬಗ್ಗೆ ತಾವು ಗಮನ ಹರಿಸಲಿಲ್ಲ ಎಂದು ಕಾಣುತ್ತದೆ. ಹಾಗಾಗಿ ಈ ಪ್ರೈವೇಟ್ ಖಂಡಸಾರಿ ಯೂನಿಟ್‌ಗಳಲ್ಲಿರತಕ್ಕಂಥ ಕಾಕಂಬಿ ಎಷ್ಟು ಉತ್ಪಾದನೆ ಆಗುತ್ತದೆ ಎಂಬ ಬಗ್ಗೆ ನಿಮಗೆ ಅಂದಾಜಿಲ್ಲ. ಬಹುಶ: ಎಲ್ಲಾ ಶುಗರ್ ಫ್ಯಾಕ್ಟರಿಗಳಲ್ಲಿ ಏನು ಉತ್ಪನ್ನ ಆಗುತ್ತದೆ, ಅಷ್ಟೇ ಪ್ರಮಾಣದಲ್ಲಿ ಖಂಡಸಾರಿ ಯೀನಿಟ್‌ಗಳಲ್ಲಿ ಜಾಸ್ತಿ ಕಾಕಂಬಿ ಉತ್ಪನ್ನ ಆಗುತ್ತದೆ. ಇದು ಸಾಲದ್ದಕ್ಕೆ ಹೊರ ರಾಜ್ಯಗಳಿಗೆ ಹೋಗುತ್ತಿದೆ. ಎಲ್ಲೆಲ್ಲಿ ಭಟ್ಟಿಗಳನ್ನು ತಯಾರು ಮಾಡತಕ್ಕಂಥ ಜಾಗಗಳಿಗೆ ಹೋಗುತ್ತದೆ. ಆಮೇಲೆ ಈ ಭಟ್ಟಿ ಇಳಿಸತಕ್ಕಂಥ ಕಾರ್ಖಾನೆಗಳಿಗೆ ಹೋಗುತ್ತದೆ ಎನ್ನತಕ್ಕದ್ದು. ಇವತ್ತೇನು ಇಲ್ಲಿಸಿಟ್ ಲಿಕ್ಕರ್ಸ್ ಸಿಗುತ್ತಿದೆ ಇದು ಬಹುತೇಕ ಇದರಿಂದ ತಯಾರಾಗುತಕ್ಕದ್ದು. ಇದನ್ನು ನಿಯಂತ್ರಣಗೊಳಿಸದಿದ್ದರೆ ತುಂಬಾ ತೊಂದರೆ ಆಗುತ್ತದೆ. ಅದನ್ನೂ ಕೂಡ ಇದರ ವ್ಯಾಪ್ತಿಯಲ್ಲಿ ತರಬೇಕು ಎಂಬ ವಿನಂತಿಯನ್ನು ಸರ್ಕಾರಕ್ಕೆ ಮಾಡುತ್ತಿದ್ದೇನೆ.

†**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ)** : ಮಾನ್ಯ ಅಧ್ಯಕ್ಷರೆ, ಈಗಾಗಲೇ 2–3 ಪ್ರಮುಖ ವಿಷಯಗಳು ಪ್ರಸ್ತಾಪ ಆಗಿದೆ. ಇಲ್ಲಿ ಬಹಳ ಮುಖ್ಯವಾಗಿರುವುದು, ಈಗ ಈ ಕಾಕಂಬಿಯಲ್ಲಿ ನಾವು ನಿಯಂತ್ರಣಗೊಳಿಸಬೇಕಾದಂತಹದು ಬಹಳ ಅಗತ್ಯತೆ ಇದೆ. ಇದು ಮೊದಲೇ ಆಗಬೇಕಾಗಿತ್ತು. ಏಕೆಂದರೆ ನಮಗೆ ಗೊತ್ತಿದ್ದಂತಹ ಸಾರಾಯಿಯಲ್ಲಿ ಸೆಕೆಂಡ್ಸ್, ಥರ್ಡ್ ಅದೆಲ್ಲಾ ಏನೇನಾಗುತ್ತದೋ ಅವೆಲ್ಲಕ್ಕೂ ಮೂಲ ಇದೇಕಾಕಂಬಿ. ಈಗ ಸೆಕೆಂಡ್ಸ್ ನಿಲ್ಲಿಸಿದ್ದೇವೆಂದು ಸರ್ಕಾರ ಹೇಳಿದ್ದಾರೆ. ಸೆಕೆಂಡ್ಸ್ ನಿಲ್ಲಿಸುವುದಕ್ಕೆ ಪಾನೀಯ ನಿಗಮ ಮಾಡಿದ್ದೇವೆ, ಅದರಿಂದ ಸೆಕೆಂಡ್ಸ್ ನಿಂತಿದೆ, ಅದರಿಂದ ಆದಾಯ ಇಷ್ಟು ಬಂದಿದೆ ಎಂದು ಹೇಳಿದ್ದಾರೆ. ಆದರೆ ಅದು ಬೇರೆ ವಿಚಾರ. ಇನ್ನೂ ಬೇರೆ ಬೇರೆ ರೀತಿ ಇದೆ. ಆ ವಿಷಯದ ಬಗ್ಗೆ ನಾನು ಚರ್ಚೆಗೆ ಹೋಗುವುದಿಲ್ಲ. ಆದರೆ ಅವೆಲ್ಲಕ್ಕೂ ಮೂಲ ಈ ಕಾಕಂಬಿ. ಹಾಗಾಗಿ ಮೊದಲನೆಯದಾಗಿ ನಮಗೆ ಸರ್ಕಾರ, ಸಹಕಾರಿ ಸಂಘಗಳ ಮೂಲಕ ಸಕ್ಕರೆ ಕಾರ್ಖಾನೆಗಳನ್ನು ನಡೆಸುತ್ತಿದೆ. ಖಾಸಗಿಯವರ ಮೂಲಕವೂ ಸಕ್ಕರೆ ಕಾರ್ಖಾನೆಗಳಿಗೆ ನಡೆಯುತ್ತೀವೆ. ಸುಮಾರು 30–32 ಸಕ್ಕರೆ ಕಾರ್ಖಾನೆಗಳು ಇವೆ. ಈಗ ಆ ಸಕ್ಕರೆ ಕಾರ್ಖಾನೆಗಳಿಗೆ ಇದುವರೆಗೆ ಒಟ್ಟು ನಮ್ಮ ಅಂಕಿ ಸಂಖ್ಯೆಯ ಪ್ರಕಾರ, ಸರ್ಕಾರಕ್ಕೆ ಸಿಗುತ್ತಿದ್ದಂತಹ ಅಂಕಿ ಸಂಖ್ಯೆಗಳ ಪ್ರಕಾರ ಕಾಕಂಬಿ ಎಷ್ಟು ಉತ್ಪಾದನೆ ಆಗಬೇಕು ಮತ್ತು ಯಾವ್ಯಾವ ಬಾಬ್ತಿಗೆ ಎಷ್ಟೆಷ್ಟು ಹೋಗುತ್ತಿತ್ತು ಎನ್ನುವಂತಹದು ಸರ್ಕಾರದ ಹತ್ತಿರ ಅಂಕಿ ಸಂಖ್ಯೆಗಳು ಇದ್ದರೆ ಅದನ್ನು ತಿಳಿಸಬೇಕು. ನಾನು ಏಕೆ ಇದನ್ನು ಮುಖ್ಯವಾಗಿ ಕೇಳುತ್ತಿದ್ದೇನೆಂದರೆ ಈಗ ಕೇಂದ್ರ ಸರ್ಕಾರ ಬಹಳ ಒಳ್ಳೆಯ ನಿರ್ಣಯವನ್ನು ತೆಗೆದುಕೊಂಡಿದೆ. ನಾವು ಈ ನಮ್ಮ ಪೆಟ್ರೋಲಿಗೆ ಇಥನಾಲನ್ನು, ಸ್ಪಿರಿಟ್ ಅನ್ನು, ಅಂದರೆ ಕಾಕಂಬಿಯನ್ನು ಬಳಸುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದೆ. ಹಾಗಾಗಿ ಈಗ ಸಾರಾಯಿ ಜೊತೆಯಲ್ಲಿ ಉಳಿದ ಕೈಗಾರಿಕೆಗಳಿಗೆ ಹೊಗುವುದರ ಜೊತೆಯಲ್ಲಿ ಪೆಟ್ರೋಲ್‌ಗೆ ಮಿಕ್ಸ್ ಮಾಡುವುದಕ್ಕೆ, ಎಥನಾಲನ್ನು ಮಾಡುವುದಕ್ಕೆ ಬೇಕಾಗಿರುವಂತಹ ಒಂದು ಪ್ರಮುಖವಾದಂತಹ

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಅಂಶ ಸಹ ಇದಾಗಿದೆ. ಇದರ ಜೊತೆ ಜೊತೆಯಲ್ಲೇ ನನಗೆ ಒಂದು ಭಯ ಇರುವಂತಹದು ಏನು ಎಂದರೆ ಪಶು ಸಂಗೋಪನೆಗೆ ಮುಖ್ಯವಾದಂತಹ ಆಹಾರ ಏನು ಇದೆ ಕ್ಯಾಟಲ್ ಫೀಡ್ ಇದೆ. ಆ ಹಿಂಡಿ ಇತ್ಯಾದಿಗಳನ್ನೇನು ಮಾಡುತ್ತಾರೆ; ಅದಕ್ಕೆ ಈ ಕಾಕಂಬಿಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಬಳಸುತ್ತಿದ್ದರು. ಈಗ ಈ ಒಂದು ಕಾನೂನು ಕರುವುದರಿಂದಾಗಿ, ನಿಯಂತ್ರಣ ಗೊಳಿಸುವುದರಿಂದಾಗಿ ಇದು ಪಶು ಆಹಾರವನ್ನು ಉತ್ಪಾದನೆ ಮಾಡುವುದಕ್ಕೆ ಯಾವ ರೀತಿ ಪರಿಣಾಮ ಆಗುತ್ತದೆ? ಈ ರೀತಿ ಇದರ ಬಗ್ಗೆ ಸರ್ಕಾರ ಯೋಚನೆ ಮಾಡಿದೆಯೋ ಹೇಗೆ ಎಂಬುದನ್ನೂ ನಮಗೆ ಸ್ಪಷ್ಟಪಡಿಸಬೇಕು. ಏಕೆಂದರೆ ಇದರ ನೈಡ್ ಎಫೆಕ್ಟ್ಸ್ ಬರೀ ಸಾರಾಯಿ ಒಂದೇ ಎಂದು ಆಗಿದ್ದರೆ ನಾವು ಸರಿ ಎಂದು ಹೇಳಬಹುದಿತ್ತು. ಆದರೆ ಪಶು ಆಹಾರದ ಮೇಲೆ ಇದು ಯಾವ ರೀತಿ ಆಗುತ್ತದೆ? ಎಥನಾಲ್‌ಮೇಲೆ, ಪೆಟ್ರೋಲಿಯಂ ಮಿಕ್ಸ್ ಮಾಡುವುದರ ಮೇಲೆ ಯಾವ ರೀತಿ ಆಗುತ್ತದೆ? ಮಾನ್ಯ ಪುಟ್ಟರಂಗಶಾಫ್ ಅವರು ಈಗ ಯೋಗ್ಯವಾಗಿ ಹೇಳಿದಂತೆ ಅದು ಈಗ ನಮ್ಮ ಸಕ್ಕರೆ ಕಾರ್ಖಾನೆಗಳು ಏನು ಇದೆ, ಅದರ ಪ್ರಮಾಣ ಕಾಕಂಬಿಯಷ್ಟು ಗೊತ್ತಾಗುತ್ತದೆ. ಆದರೆ ಬೇರೆ ಬೇರೆ ರೀತಿಯಲ್ಲಿ ಈಗ ಕಾಕಂಬಿಗಳು ಸಿದ್ಧವಾಗುತ್ತಿದೆಯಲ್ಲಾ, ಅದರ ಪ್ರಮಾಣ ಎಷ್ಟು ಎಂದು ಇದುವರೆಗೆ ಸರ್ಕಾರ ಅಳತೆ ಮಾಡಿದೆಯೋ ಹೇಗೆ? ಎಷ್ಟು ಪ್ರಮಾಣದಲ್ಲಿ ಇದೆ ಎನ್ನುವುದರ ಬಗ್ಗೆ ಸರ್ಕಾರದ ದಾಖಲಾತಿಗಳು ಏನು ಹೇಳುತ್ತವೆ? ಇದರ ಬಗ್ಗೆ ನಮಗೆ ಒಂದು ಸ್ಪಷ್ಟವಾದಂತಹ ವಿವರಗಳನ್ನು ಕೊಡಬೇಕು ಮತ್ತು ಇದನ್ನು ಅಗತ್ಯವಾಗಿ ನಿಯಂತ್ರಿಸಬೇಕು. ನಿಯಂತ್ರಣ ಮಾಡುವುದರ ಬಗ್ಗೆ ನಮ್ಮಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯಗಳು ಇಲ್ಲ. ಆದರೆ ನಿಮಗೆ ಕಾಕಂಬಿ ಉತ್ಪಾದನೆ ಪ್ರಮಾಣದ ಎಷ್ಟು ಇದೆ? ಯಾವ್ಯಾವುದಕ್ಕೆ ಬಳಕೆ ಈಗ ಹೇಗೆ ಆಗುತ್ತಿದೆ? ಸಕ್ಕರೆ ಕಾರ್ಖಾನೆ ಹೊರತಾಗಿ ಕಾಕಂಬಿ ಬೇರೆ ಬೇರೆ ಕಡೆಯಲ್ಲಿ ಕಾಕಂಬಿಗಳು ಎಷ್ಟು ಉತ್ಪಾದನೆ ಆಗಿದೆ, ಅದರ ಬಳಕೆ ಹೇಗೆ ಆಗುತ್ತಿದೆ? ಈ ರೀತಿಯಾದಂತಹ ವಿಷಯವಾದಂತಹ ಮಾಹಿತಿಗಳು ಸರ್ಕಾರದಲ್ಲಿದ್ದರೆ ಅದನ್ನೂ ಸದನಕ್ಕೆ ತಿಳಿಸಿದರೆ ನಮಗೆ ಆ ಅನುಕೂಲವಾಗುತ್ತದೆ ಎನ್ನುವಂಥದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈ ಕಾಕಂಬಿಯ ಬಗ್ಗೆ ಮಾನ್ಯ ಹೆಗಡೆಯವರು ಏನು ಹೇಳಿದರು, ಸುಮಾರು 32 ಶುಗರ್ ಫ್ಯಾಕ್ಟರಿಯಲ್ಲಿ ತಯಾರಾಗುತ್ತದೆ. ಆದರೆ ನಿರ್ದಿಷ್ಟವಾಗಿ ಇಷ್ಟೇ ತಯಾರಾಗಿದೆ ಎಂದು ಹೇಳುವಮತಹ ಲೆಕ್ಕಾಚಾರಗಳು ನಮಗೆ ಕೊಟ್ಟಿಲ್ಲ, ಸರ್ಕಾರಕ್ಕೆ ಸಿಕ್ಕಿಲ್ಲ. ಅವರು ಏನು ಮಾಡುತ್ತಿದ್ದರು? ಕೆಮಿಕಲ್ ಇಂಡಸ್ಟ್ರೀಸ್‌ನವರು ಬಂದರೆ ಅಥವಾ ಯಾರಾದರೂ ಎಕ್ಸ್‌ಪೋರ್ಟ್ ಮಾಡುವವರು ಬಂದರೆ ನಮ್ಮಲ್ಲಿ ಇಷ್ಟು ಸ್ಟಾಕ್ ಉಂಟು ಎಂದು ಹೇಳಿ ಎಕ್ಸೈಜ್ ಕಮೀಷನರ್ ಅವರು ಲೆಟರ್ ಬರೆಯುತ್ತಿದ್ದರು. ಅದರ ಮೇಲೆ ಎಕ್ಸೈಜ್ ಕಮೀಷನರ್ ಅವರು ಪರ್ಮಿಟ್ ಇಶ್ಯೂ ಮಾಡುತ್ತಿದ್ದರು. ಹೀಗಾಗಿ ತಾವು ಹೇಳಿದ ರೀತಿಯಲ್ಲಿ ಮಾನ್ಯ ಪುಟ್ಟರಂಗಶಾಫ್ ಅವರು ನಮ್ಮ ಜಯಪ್ರಕಾಶ್ ಹೆಗಡೆ ಅವರು, ಮಾನ್ಯ ಶ್ರೀನಿವಾಸ ಗೌಡರು ಹೇಳಿದ ರೀತಿಯಲ್ಲಿ ಅಕ್ರಮಗಳು ನಡೆಯುತ್ತಿತ್ತು. ಇಲ್ಲವೆಂದಲ್ಲ. ಅದನ್ನೂ ಕೂಡ ತಡೆ ಹಿಡಿಯುವುದಕ್ಕಾಗಿ ಅನೇಕ ತಿದ್ದುಪಡಿಗಳನ್ನು ನಮ್ಮ ನಿಯಮಗಳಲ್ಲಿ ತಂದಿದ್ದೇವೆ. ಇತ್ತೀಚೆಗೆ ಈ ಕೆಮಿಕಲ್ ಇಂಡಸ್ಟ್ರೀಗೆ ರೆಕ್ಟಿಫೈಡ್ ಸ್ಪಿರಿಟ್ ಕೊಡಬೇಕಾದರೆ, ಮದ್ಯಸಾರ ಕೊಡಬೇಕಾಗಿದ್ದರೆ ಅದರ ಬಗ್ಗೆ ಟೆಕ್ನಿಕಲ್ : ಎಕ್ಸ್‌ಪರ್ಟ್ ಕಮಿಟಿ ಮಾಡಿ ಆ ಕಮಿಟಿ ರೆಕ್ಮಂಡ್ ಮಾಡಿದ ನಂತರ ಹೈಪವರ್ ಕಮಿಟಿ ಮುಂದೆ ಬರಬೇಕಾಗಿತ್ತು. ಈ ಹೈಪವರ್ ಕಮಿಟಿಯಲ್ಲಿ ತೀರ್ಮಾನವಾದ ನಂತರ ಎಷ್ಟೆಷ್ಟು ಲೀಟರ್? ಎಷ್ಟು ಲಕ್ಷ, ಎಷ್ಟು ಸಾವಿರ ಲೀಟರ್ ಕೊಡಬೇಕೆಂದು ಹೇಳಿ ಆ ನಂತರ ಎಕ್ಸೈಜ್ ಕಮೀಷನರ್‌ಗೆ ಅಧಿಕಾರವನ್ನು

ಕೊಡುವಂತಹ ಪದ್ಧತಿಯನ್ನು ಇಟ್ಟುಕೊಂಡು ಬಂದಿದ್ದೇವೆ. ಆಮೇಲೆ ಈ ಕಾಕಂಬಿ ನಿಯಂತ್ರಣ ಕಾಯಿದೆ ಬಂದರೆ, ಜಾರಿಗೆ ಬಂದಾಗ ಆ ಶುಗರ್ ಫ್ಯಾಕ್ಟರಿಯವರು ವರ್ಷಕ್ಕೆ ಎಷ್ಟು ಕಬ್ಬನ್ನು ಅರೆಯುತ್ತಾರೆ ಎಷ್ಟು ಕಬ್ಬು ಅರೆದರೆ ಎಷ್ಟು ಕಾಕಂಬಿ ಬರುತ್ತದೆ? ಈ ಕಾಕಂಬಿಯಲ್ಲಿ ಎಷ್ಟು ಸ್ಟೋರೇಜ್ ಕೆಪ್ಯಾಸಿಟಿ ಇದೆ? ಎಷ್ಟು ಸ್ಟೋರೇಜಿಂಗ್ ಕೆಪಾಸಿಟಿ ಮಾಡಿಕೊಂಡಿದ್ದೇವೆ, ಇದೆಲ್ಲವನ್ನೂ ತಿಳಿಸಿ ಹೇಳಬೇಕಾಗುತ್ತದೆ. ಆಮೇಲೆ ಸ್ಟೋರೇಜ್ ಮೇಲೆ ಕೂಡ ನಮ್ಮ ಇಲಾಖೆಯ ಕಂಟ್ರೋಲ್ ಬರುತ್ತದೆ. ಅದು ಯಾರೂ ಕೂಡ ರೆಕ್ಟಿಫೈಡ್ ಸ್ಪಿರಿಟ್ ಅನ್ನು ಡೈರೆಕ್ಟಾಗಿ ಮಾರಲಿಕ್ಕೆ ಬರುವುದಿಲ್ಲ. ಇತ್ತೀಚೆಗೆ ನಿಯಮದಲ್ಲಿ ತಿದ್ದುಪಡಿ ಮಾಡಿ ಈ ಮದ್ಯಸಾರವನ್ನು ನಮ್ಮ ಕರ್ನಾಟಕ ರಾಜ್ಯ ಪಾನ ನಿಗಮ ಏನು ಇದೆ? ಅದರ ಮೂಲಕವೇ ಮಾಡಬೇಕೆಂದು ಹೇಳಿ ತೀರ್ಮಾನ ಮಾಡಿ, ಕಾನೂನಿನಲ್ಲಿ ಕೂಡ ತಿದ್ದುಪಡಿ ಮಾಡಿಕೊಂಡಿದ್ದೇವೆ. ಸದ್ಯಕ್ಕೆ ಅದು ಪ್ರಾರಂಭ ಆಗುತ್ತದೆ. ಏಕೆಂದರೆ ಅದನ್ನು ನಾವು ಸ್ಟೋರೇಜ್ ಮಾಡುವಂತಹ ಫೆಸಿಲಿಟೀಸ್ ಕಾರ್ಪೋರೇಷನ್‌ನಲ್ಲಿ ಆಗಿಲ್ಲ. ಇತ್ತೀಚೆಗೆ 6–7 ತಿಂಗಳುಗಳ ಹಿಂದೆ ಸ್ಥಾಪನೆ ಆಗಿದ್ದು. ಹಾಗಾಗಿ ಆ ಮದ್ಯಸಾರವನ್ನು ಸ್ಟೋರ್ ಮಾಡುವಂತಹ ಒಂದು ರಿಸರ್ವಾಯರ್ ನಮ್ಮಲ್ಲಿ ಕೂಡ ಬೇಕಾಗುತ್ತದೆ. ಆದರೂ ಕೂಡ ನಮ್ಮ ಈ ಕಾರ್ಪೊರೇಷನ್‌ನಿಂದ ಅದನ್ನು ರಿಜಿಸ್ಟರ್ ಮಾಡುವಂತಹ ವ್ಯವಸ್ಥೆಯನ್ನು ನಿಯಮದ ಮೂಲಕ ನಾವು ಏರ್ಪಾಡು ಮಾಡಿದ್ದೇವೆ. ಹಾಗಾಗಿ ಕಟ್ಟುನಿಟ್ಟಿನ ಕಾರ್ಯಕ್ರಮವನ್ನು ಈ ಒಂದು ಕಳ್ಳ ಸಾಗಾಣಿಕೆ ತಡೆಯಲಿಕ್ಕಾಗಿ ನಾವು ಮಾಡಿಕೊಂಡೆವು ಬಂದಿದ್ದೇವೆ. ಇವತ್ತು ಕಾಕಂಬಿ ಮೇಲೆ ನೇರವಾದ ಕಂಟ್ರೋಲ್ ನಮಗೆ ಇರಲಿಲ್ಲ. ಏಕೆಂದರೆ ಅದು ಸೆಂಟ್ರಲ್ ಕಾಯಿದೆ ಆಗಿತ್ತು. 1990ರಲ್ಲಿ ಅಬಾಲಿಷ್ ಆಗಿತ್ತು. ಆನಂತರ ರಾಜ್ಯದಲ್ಲಿ ಯಾರ ಕಾಲದಲ್ಲೂ ಕಾನೂನು ಮಾಡಲಿಲ್ಲ. ಕೆಲವು ಕಡೆ ಇತ್ತು. ಮಹಾರಾಷ್ಟ್ರ ಯುಪಿಯಲ್ಲಿದೆ. ಅನೇಕ ಕಡೆ ಇದೆ. ಆದರೆ ಈ ರಾಜ್ಯದಲ್ಲಿ ಇರಲಿಲ್ಲ. ಆದರೂ ಕೂಡ ಎಕ್ಸೈಜ್ ಕಮೀಷನರ್, ನಮ್ಮ ಎಕ್ಸೈಜ್ ಡಿಪಾರ್ಟ್‌ಮೆಂಟ್ ಮೂಲಕ ಕಂಟ್ರೋಲ್ ಮಾಡಿದರೂ ಕೂಡ ಅದನ್ನು ಕೊಶ್ಚನ್ ಮಾಡುವಂತಹ ಸ್ವಭಾವ ನಮ್ಮ ಅನೇಕ ಉದ್ದಿಮೆಗಳಿಗೆ ಬಂದಿದೆ. ಲೆಟರ್ ಹೆಡ್‌ನ ಫ್ಯಾಕ್ಟರಿಗಳು ಇದ್ದಿರಬಹುದು. ಇಲ್ಲವೆಂದಲ್ಲ. ಅದನ್ನು ಕಂಟ್ರೋಲ್ ಮಾಡುವುದಕ್ಕಾಗಿ ಟೆಕ್ನಿಕಲ್ ಕಮಿಟಿ ಮತ್ತು ಹೈಪವರ್ ಕಮಿಟಿಯನ್ನೂ ಕೂಡ ನಾವು ಮಾಡಿದ್ದೇವೆ. ಮತ್ತು ಅದಕ್ಕೆ ವಾಚ್ ಡಾಗ್ ಕೂಡ ಇದ್ದಾರೆ. ಒಂದು ಟೀಮ್ ಕೂಡ ಇದೆ. ಇವತ್ತು ಇಎಬಿಯವರು ಅದನ್ನು ಫಾಲೋ ಮಾಡಿ ಈ ಸ್ಪಿರಿಟ್ ಇವತ್ತು ಇಶ್ಯೂ ಮಾಡಿರುವುದು ತಲುಪಿದೆಯೋ ಇಲ್ಲವೇ? ಅವರು ತೆಗೆದುಕೊಂಡು ಹೋಗಿ ಎಷ್ಟು ಪ್ರೊಡ್ಯೂಸ್ ಮಾಡಿದ್ದಾರೆ? ಏನು ಪ್ರೊಡ್ಯೂಸ್ ಮಾಡಿದ್ದಾರೆ? ವಾಟ್ ಇಸ್ ದೇರ್ ಎಂಡ್ ಪ್ರಾಡಕ್ಟ್, ಅದನ್ನೂ ಕೂಡ ಚೆಕ್ 'ಮಾಡುವಂತಹ ವ್ಯವಸ್ಥೆಯನ್ನು ಇದರಲ್ಲಿ ನಾವು ಕಲ್ಪಿಸಿಕೊಂಡಿದ್ದೇವೆ. ಎಕ್ಸೈಜ್‌ಲಾದಲ್ಲೂ ಮಾಡಿದ್ದೇವೆ, ಮತ್ತು ಈ ಕಾಕಂಬಿ ನಿಯಂತ್ರಣ ಕಾಯಿದೆಯಲ್ಲೂ ಕೂಡ ಮಾಡಿದ್ದೇವೆ. ಯಾವ ರೀತಿ ಸ್ಟೋರ್ ಮಾಡುತ್ತಾರೆ? ಎಷ್ಟು ಸ್ಟೋರ್ ಮಾಡುತ್ತಾರೆ? ಯಾವುದನ್ನು ತೆಗೆದುಕೊಂಡು ಹೋಗುತ್ತಾರೆ? ಮತ್ತು ಆ ರೀತಿ ಕಳ್ಳ ಸಾಗಾಣಿಕೆ ನಡೆಯುವುದಾದರೆ ಆ ಡಿಸ್ಟಿಲರಿ ಕ್ಲೋಸ್ ಮಾಡುವಂತಹದನ್ನು ಮತ್ತು ಎಲ್ಲಾ ಆಸ್ತಿ ಮುಟ್ಟುಗೋಲು ಮಾಡುವಂತಹದನ್ನು ಅಥವಾ ಲಾರಿಗಳನ್ನು ವಶಪಡಿಸಿಕೊಳ್ಳುವುದನ್ನು, ಇದೆಲ್ಲವನ್ನೂ ಕೂಡ ಈ ಕಾನೂನಿನಲ್ಲಿ ಅಳವಡಿಸಿಕೊಂಡು ಬಂದಿದೆ. ಇದಲ್ಲದೆ, ಈ ಒಂದು ಬಿಲ್ ಇಲ್ಲದಿದ್ದರೆ, ನಿಯಮ ಇಲ್ಲದಿದ್ದರೆ ಈ ಸರ್ಕಾರದಕ್ಕೆ ಅಂತಹ ಅಧಿಕಾರ ಸಿಕ್ಕುವುದಿಲ್ಲ ಈ ಅಧಿಕಾರ ಸರ್ಕಾರಕ್ಕೆ ಸಿಕ್ಕರೆ ಅದನ್ನು ರೆಗ್ಯುಲೇಟ್ ಮಾಡುವುದಕ್ಕೆ ಅನುಕೂಲಗಳು ಆಗುತ್ತದೆ. ತಾವೇನು ಸಂಶಯ ಪಡುತ್ತಿದ್ದೀರಿ: ಇವೆಲ್ಲವನ್ನೂ ಕಂಟ್ರೋಲ್ ಮಾಡಬೇಕೆಂದು ಹೇಳಿ ಅದಕ್ಕೂ ಕೂಡಪೂರಕವಾಗಿ ಇದು ಆಗುತ್ತದೆ. ಅದಕ್ಕಾಗಿ ನನ್ನ ಪ್ರಾರ್ಥನೆ ಇಷ್ಟೇ. ತಾವು ದಯಮಾಡಿ ಈ ಒಂದು ನಿಯಮಗಳನ್ನು ಪಾಸ್ ಮಾಡಿಕೊಡಬೇಕೆಂದು ಹೇಳಿ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಎಚ್. ಪುಟ್ಟಲಿಂಗನಾಥ್ : ಒಂದು ವಿಚಾರ ತಾವು ಹೇಳಲಿಲ್ಲ. ಖಂಡಸಾರಿ ಯೂನಿಟ್‌ನಿಂದ ಎಷ್ಟು ಆಗುತ್ತದೆ ಎನ್ನತಕ್ಕದ್ದನ್ನು ತಾವು ಹೇಳಲಿಲ್ಲ. ಅದನ್ನು ಇದರ ವ್ಯಾಪ್ತಿಯೊಳಗೆ ತರಬೇಕು ಎನ್ನದಕ್ಕದ್ದು ನಮ್ಮ ಉದ್ದೇಶ.

ಶ್ರೀ ಎಂ.ಎಂ. ನಾಣಯ್ಯ : ಎಲ್ಲವೂ ಸೇರುತ್ತದೆ ಇದರಲ್ಲಿ.

ಶ್ರೀ ಎಸ್.ಎಚ್. ಪುಟ್ಟಲಿಂಗನಾಥ್ : ಉದ್ದೇಶ ಒಳ್ಳೆಯದು ಇದೆ, ನಾನು ಇಲ್ಲ ಎಂದು ಹೇಳಲಿಲ್ಲ. ಆದರೆ ಈಗ ಏನಾಗುತ್ತದೆ? ಒಂದು ಸಾರಿ ಏನಾಯಿತು, ನನ್ನ ಕ್ಷೇತ್ರದಲ್ಲಿ ಹಿಡಿದರು. ಮೂಟೆ ಜೋಳದಲ್ಲಿ ತುಂಬಿ ಬಿಟ್ಟು, ಪ್ಲಾಸ್ಟಿಕ್ ಬ್ಯಾಗ್‌ಗೆ ತುಂಬಿ ಒಂದು ಲೋಡ್ ಹೋಯಿತು. ಎಲ್ಲಿಗೆ ಹೋಯಿತು? ಮಂಗಳೂರು ಕಡೆಗೆ ಹೋಯಿತು. ಬಹಳಷ್ಟು ಸಂಖ್ಯೆಯಲ್ಲಿ, ಪ್ರಮಾಣದಲ್ಲಿ ಮಂಗಳೂರಿಗೆ ಹೋಗುತ್ತದೆ. ಈ ಖಂಡಸಾರಿ ಯೂನಿಟ್‌ನಿಂದ ಹೋಗತಕ್ಕದ್ದು ಹೋಗುತ್ತದೆ. ಅದನ್ನು ತಡೆಗಟ್ಟಬೇಕು. ಈ ನಿಯಮದ ಅಡಿಯಲ್ಲಿ ತರಬೇಕು.

ಶ್ರೀ ಎಂ.ಎಂ. ನಾಣಯ್ಯ : ನಾನು ಸಂಪೂರ್ಣವಾಗಿ, ಕಳ್ಳ ಸಾಗಾಣಿಕೆ ಆಗುವುದಿಲ್ಲ ಎಂದು? ಹೇಳುತ್ತಿಲ್ಲ. ಆದರೂ ಕೂಡ ಸಾಕಷ್ಟು ನಿಯಂತ್ರಣ ಇವತ್ತು ನಾವು ಮಾಡಿದ್ದೇವೆ. ಕಾನೂನನ್ನು ಕೂಡ ಕಠಿಣವಾಗಿ ಮಾಡಿದ್ದೇವೆ. ಇವತ್ತು ಅದನ್ನು ಕಾಗ್ನಿಸಬಲ್ ಅಫೆನ್ಸ್ ಮಾಡಿದ್ದೇವೆ ಮತ್ತು ನಾನ್ ಬೇಲಬಲ್ ಅಫೆನ್ಸ್ ಕೂಡ ಮಾಡಿದ್ದೇವೆ

ಶ್ರೀ ಎಸ್.ಎಚ್. ಪುಟ್ಟಲಿಂಗನಾಥ್ : ಅಲ್ಲ ಎಷ್ಟು ಯೂನಿಟ್ ಇದೆ ಎನ್ನುವುದನ್ನು ನೀವು ಲೆಕ್ಕ ಇಟ್ಟಿಲ್ಲ.

ಶ್ರೀ ಎಂ.ಎಂ. ನಾಣಯ್ಯ : ಅವರಿಗೂ ಬರುತ್ತದೆ. ಯಾರೇ ಆಗಲಿ. ಅದು ಬೆಲ್ಲದ ಯೂನಿಟ್ ಆಗಲಿ, ಖಂಡಸಾರಿ ಯೂನಿಟ್ಸ್ ಯಾವುದೇ ಆಗಲಿ, ಅವೆಲ್ಲವೂ ಕೂಡ ಇದಕ್ಕೆ ಬರುತ್ತದೆ. ಇತ್ತೀಚಿನ ವರೆಗೆ ನಮಗೆ ಏನಾಗಿತ್ತು ಅಂದರೆ ಸಾಕಷ್ಟು ಸಿಬ್ಬಂದಿ ಕೊರತೆ ಇತ್ತು. ಇತ್ತೀಚೆಗೆ ಕೆಪಿಎಸ್‌ಸಿ ಕೂಡ 250 ಸಬ್ ಇನ್ಸ್‌ಪೆಕ್ಟರ್‌ಗಳನ್ನು ರಿಕ್ರೂಟ್ ಮಾಡಲಿಕ್ಕೆ ಆದೇಶವನ್ನು ಕೊಟ್ಟಿದೆ. ಇವತ್ತು ಟ್ರೈನಿಂಗ್ ಮಾಡಿ ನಾವು ಎಲ್ಲಾ ಕಡೆ ಹೋಸ್ಟಿಂಗ್ ಮಾಡುತ್ತೇವೆ. ಯಾವಾಗ ಸಬ್ ಇನ್ಸ್‌ಪೆಕ್ಟರ್‌ಗಳು ಫೀಲ್ಡ್‌ಗೆ ಬರುತ್ತಾರೆ, ಆಮೇಲೆ ಎಲ್ಲವನ್ನೂ ಕೂಡ ಕಂಟ್ರೋಲ್ ಮಾಡಲು ಅನುಕೂಲ ಆಗುತ್ತವೆ. ಇತ್ತೀಚೆಗೆ, ನಮ್ಮ ಸರ್ಕಾರ ಬಂದ ಮೇಲೆ ನಾಲ್ಕು ವರ್ಷ ಪ್ರಯತ್ನ ಪಟ್ಟರೂ ಇತ್ತೀಚೆಗೆ 250 ಸಬ್ ಇನ್ಸ್‌ಪೆಕ್ಟರ್ ನೇಮಕಕ್ಕೆ ಇವತ್ತು ಕೆಪಿಎಸ್‌ಸಿ ಯಿಂದ ಅದಕ್ಕೆ ಕ್ಲಿಯರನ್ಸ್ ಬಂತು, ಸುಪ್ರೀಂ ಕೋರ್ಟ್ ವರೆಗೆ ಆ ವಿಚಾರ ಹೋಗಿತ್ತು. ಆ ನಂತರ ಸುಪ್ರೀಂ ಕೋರ್ಟ್ ಕ್ಲಿಯರ್ ಆಕಡೆ ಇವತ್ತು ಕೆಪಿಎಸ್‌ಸಿ ಮುಖಾಂತರ ಅವರು ಸೆಲೆಕ್ಷನ್ ಮಾಡುವುದಕ್ಕೆ ಹಾಕುಂ ಕೂಡ ಕಳುಹಿಸಿಕೊಟ್ಟಿದ್ದೇವೆ. ಹಾಗಾಗಿ ಈ ಸ್ಟಾಫ್‌ನಬರನ್ನುತುಂಬಿದರೆ ಈ ಎಲ್ಲವನ್ನೂ ನಿಯಂತ್ರಣ ಮಾಡಲಿಕ್ಕೆ ನಮಗೆ ಸಾಕಷ್ಟು ಶಕ್ತಿ ಕೂಡ ಬರುತ್ತದೆ. ಆದ್ದರಿಂದ ಈ ಒಂದು ನಿಯಮ ಏನು ತಂದಿದ್ದೇವೆ 2004 ಕಾಕಂಬಿ ನಿಯಂತ್ರಣ ಕಾಯಿದೆ, ನಿಯಮ ಅದನ್ನು ಪಾಸ್ ಮಾಡಿದರೆ ತಾವು ಸಸ್ಪೆಕ್ಟ್ ಮಾಡುವಂತಹ ಎಲ್ಲಾ ದುರ್ವ್ಯವಹಾರ ಇದೆ, ಅದೆಲ್ಲವನ್ನೂ ಕೂಡ ನಾವು ತಡೆ ಹಿಡಿತಲಿಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

7.00 ಪಿ ಎಂ

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಒಂದು ಸಲಹೆ ಕೊಡಲಿಚ್ಛಿಸುತ್ತೇನೆ. ಈಗ ನಿಜವಾಗಿಯೂ ಕಾಕಂಬಿ ಮೇಲೆ ನಿಮಗೆ ಹಿಡಿತ ಸಿಕ್ಕಿದರೆ ರಾಜ್ಯದಲ್ಲಿ ಯಾವುದೇ ಸೆಕೆಂಡ್ಸ್ ಆಗಲಿ, ಥರ್ಡ್ಸ್ ಆಗಲಿ

ಬರಲು ಸಾಧ್ಯವಿಲ್ಲ ನೀವು ಯಾವ ರೀತಿ ಹಿಡಿತ ತೆಗೆದುಕೊಳ್ಳಬೇಕೆಂದರೆ, ಫೆಡರೇಶನ್‌ನಲ್ಲಿ ಸಕ್ಕರೆಯನ್ನು ಆಕ್ಷನ್ ಮಾಡಿ ಮಾರಾಟ ಮಾಡುತ್ತಿರುವುದರಿಂದ ಅವರು buyersನಲ್ಲಿ ಬರುತ್ತಾರೆ. ಅದೇ ರೀತಿ ಕಾಕಂಬಿಗೆ ಒಂದೊಂದು ಕಾರ್ಖಾನೆಯಲ್ಲಿ ಒಂದೊಂದು ರೀತಿಯ ದರ ಇರುತ್ತದೆ. ಅದರ ಲೆಕ್ಕವನ್ನು ನೀವು ಪಡೆದುಕೊಳ್ಳಬೇಕು. ಅಲ್ಲಿಂದಲೇ ಅವ್ಯವಹಾರ ಪ್ರಾರಂಭವಾಗುವುದು. ಕಾಕಂಬಿಯ ಲೆಕ್ಕಾಚಾರ ಸರಿಯಾಗಿ ಸಿಗುವ ಮೂಲಕ ಎಲ್ಲಾ ಕಾರ್ಖಾನೆಗಳಿಗೂ ಒಂದೇ ದರ ಲಭ್ಯವಾದಲ್ಲಿ ಕಾಕಂಬಿ ಸೆಕೆಂಡ್ಸ್ ಹೋಗುವುದಾಗಲಿ, illicit liquor ಗೆ ಹೋಗುವುದಾಗಲಿ ನಿಲ್ಲುತ್ತದೆ. ಈ ವ್ಯವಸ್ಥೆಯನ್ನು ಅಲವಡಿಸಿಕೊಳ್ಳುವುದು ಒಳ್ಳೆಯದೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ.ಎಂ. ನಾಣಯ್ಯ : ಎಲ್ಲವನ್ನೂ ಲೆಕ್ಕವಿಡಬೇಕೆಂಬುದರ ಬಗ್ಗೆಯೇ ನಾವು ಹೇಳಿದ್ದು. ಒಂದು ಸಕ್ಕರೆ ಕಾರ್ಖಾನೆಯಲ್ಲಿ ಎಷ್ಟು ಪ್ರಮಾಣದಲ್ಲಿ ಸಕ್ಕರೆ ಅರೆಯುತ್ತಾರೆ? ಅದರಿಂದ ಎಷ್ಟು ರೆಕ್ಟಿಫೈಡ್ ಸ್ಪಿರಿಟ್ ಲಭ್ಯವಾಗುತ್ತದೆ? ಮೊಲಾಸಸ್ ಎಷ್ಟು ಪ್ರಮಾಣದಲ್ಲಿ ಬರುತ್ತದೆ? ಮುಂತಾದ ಲೆಕ್ಕಗಳ ಸಂಪೂರ್ಣ ವಿವರಗಳನ್ನು ನಮಗೆ ಒದಗಿಸಿಕೊಡಬೇಕಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಕಾಕಂಬಿಯನ್ನು ಒಂದೊಂದು ಸಕ್ಕರೆ ಕಾರ್ಖಾನೆಗಳವರು ಒಮದೊಂದು ದರದಲ್ಲಿ ಮಾರಾಟ ಮಾಡುತ್ತಾರೆ. ಒಂದು ಕಾರ್ಖಾನೆ ಒಂದು ಸಾವಿರ ರೂಪಾಯಿಗೆ ಮಾರಾಟ ಮ್ಮಾಡಿದರೆ, ಮತ್ತೊಂದು ಕಾರ್ಖಾನೆ ಐದು ನೂರು ರೂಪಾಯಿಗಳಿಗೆ ಮಾರಾಟ ಮಾಡುವುದರಿಂದ ಅಲ್ಲಿ ಗ್ಯಾಪ್ ಇದೆ. ಅಲ್ಲಿಯೇ ಅವ್ಯವಹಾರ ಜರುಗುವುದು. ಆದುದರಿಂದ, ಈ ಕೂಡಲೇ ನೀವು ದರ ನಿಗದಿಪಡಿಸಲು ಕ್ರಮ ಕೈಗೊಳ್ಳಬೇಕು.

ಶ್ರೀ ಎಂ.ಎಂ. ನಾಣಯ್ಯ : ಸನ್ಮಾನ್ಯ ಅಧ್ಯಕ್ಷರೇ, There is gradation also. ಅದನ್ನೂ ಕೂಡ ಶ್ರೇಣೀಕರಣ ಮಾಡಬೇಕೆಂದು ಈಗಾಗಲೇ ತೀರ್ಮಾನವಾಗಿದೆ. ಯಾವ ಕ್ವಾಲಿಟಿ ಇರಬೇಕೆಂಬ ಬಗ್ಗೆಯೂ ತೀರ್ಮಾನ ಕೈಗೊಂಡಿದ್ದೇವೆ. ಆದುದರಿಂದ, ದರ ನಿಗದಿಪಡಿಸುತ್ತೇವೆ. ನಂತರ, ಎಷ್ಟು ಪ್ರಮಾಣದಲ್ಲಿ ಕಾಕಂಬಿ ಬರುತ್ತದೆಂದು ಮಾನ್ಯ ಸದಸ್ಯರಾದ ಜಯಪ್ರಕಾಶ್ ಹೆಗ್ಡೆಯವರು ಕೇಳಿರುವುದಕ್ಕೆ ವಿವರ ನೀಡುವುದಾದರೆ, The total quantity of molasses manufactured in the State is about 7.5 lakh metric tons.4.2 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಡಿಸ್ಟಿಲರಿಗಳಿಗೆ ಕೊಡುತ್ತಾರೆ, ಕ್ಯಾಟಲ್ ಫೀಡ್‌ಗೆ 1.67 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ನೀಡುತ್ತಾರೆ. export 0.35 lakh metric tons, other purposes 0.11 lakh metric tons.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಕ್ಯಾಟಲ್ ಫೀಡ್‌ಗೆ ಎಷ್ಟು ಪ್ರಮಾಣದಲ್ಲಿ ಕಾಕಂಬಿ ನೀಡಲಾಗಿತ್ತು ಮತ್ತು ಅವರು ಎಷ್ಟು ಪ್ರಮಾಣದಲ್ಲಿ ತಯಾರಿಸಿದ್ದಾರೆಂಬ ಲೆಕ್ಕವನ್ನು ನೀವು ಪಡೆದುಕೊಳ್ಳಬೇಕು. ಇಲ್ಲದಿದ್ದರೆ, ಏನೂ ಗೊತ್ತಾಗುವುದಿಲ್ಲ. ಸುಮ್ಮನೆ ಕ್ಯಾಟಲ್ ಫೀಡ್ ಯುನಿಟ್‌ಗೆಂದು ತೆಗೆದುಕೊಂಡು ಹೋಗಿ ಬೇರೆಡೆಗೆ ಸೆಕೆಂಡ್ಸ್‌ಗೆ, illicit liquor ಗೆ ಡೈವರ್ಟ್ ಮಾಡುತ್ತಿದ್ದಾರೆ. ಆದಕಾರಣ, ಕ್ಯಾಟಲ್ ಫೀಡ್ ಯುನಿಟ್‌ಗೆ ಎಷ್ಟು ಪ್ರಮಾಣದಲ್ಲಿ ಪಡೆದುಕೊಂಡು ಹೋಗಿದ್ದಾರೆ ? ಅವರು ಆ ಯುನಿಟ್‌ನಲ್ಲಿ ಎಷ್ಟು ಪ್ರಮಾಣದಲ್ಲಿ ತಯಾರಿಸಿದ್ದಾರೆಂಬುದನ್ನು ತಿಳಿದುಕೊಂಡರೆ ನಿಮಗೆ ಸರಿಯಾದ ಲೆಕ್ಕ ಸಿಗುತ್ತದೆ, ಇಲ್ಲದಿದ್ದರೆ ಸಿಗುವುದಿಲ್ಲ.

ಶ್ರೀ ಎಂ.ಎಂ. ನಾಣಯ್ಯ : ಸನ್ಮಾನ್ಯ ಅಧ್ಯಕ್ಷರೇ, That is the very purposes. I brought this bill. ಏಕೆಂದರೆ, ಆಗ ಎಲ್ಲಾ ಕಡೆಗಳಲ್ಲೂ ಸರಿಯಾದ ಲೆಕ್ಕ ಸಿಗುತ್ತದೆಂದು ಹೇಳುವುದಕ್ಕಾಗುತ್ತದೆ. ಲೆಕ್ಕ ಹಿಡಿತಕ್ಕೆ ತರಬೇಕು. ಅವರ ಅಕೌಂಟ್ ಅನ್ನೂ ಕೂಡ ನಾವು ಆಡಿಟ್ ಮಾಡಿಸಬೇಕಲ್ಲದೆ ಅವರು ಸಲ್ಲಿಸಿದ ಆಡಿಟ್ ಸರಿಯಿಲ್ಲದಿದ್ದರೂ ನಮ್ಮ ಥರ್ಡ್ ಪಾರ್ಟಿಯಿಂದಲೂ ಆಡಿಟ್ ಮಾಡಿಸಬೇಕು. ಇದಕ್ಕೋಸ್ಕರ ಈ ವಿಧೇಯಕ ತಂದಿದ್ದೇವೆ. ವಿದೇಯಕದಲ್ಲಿ ನ್ಯೂನತೆಗಳಿವೆಯೇಂದು ತವೇನು ಸಂಶಯಪಡುತ್ತಿದ್ದೀರಿ, ಅವೆಲ್ಲವನ್ನೂ ಸರಿಪಡಿಸುವುದಕ್ಕೆ, to

plug all the loophole of the department and the industries, this bill has been brought before this hon'ble house. therefore, I submit that the hon'ble members may please pass this bill.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಕಾಕಂಬಿ (ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 41ರವರೆಗೆ

ಅಧ್ಯಕ್ಷರು ಪ್ರಸ್ತಾವ ಏನೆಂದರೆ : "ಖಂಡ 2ರಿಂದ 41ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 41ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗು ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗು ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಎಂ. ನಾಣಯ್ಯ (ಅಬ್ಕಾರಿ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಕಾಕಂಬಿ (ನಿಯಂತ್ರಣ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಕಾಕಂಬಿ (ನಿಯಂತ್ರಣ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

7 ಪ್ರಕಟಣೆ

ಅಧ್ಯಕ್ಷರು : ಈಗ ಒಂದು ಪ್ರಕಟಣೆ ಇದೆ.

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ಈ ಕೆಳಕಂಡ ವಿಧಾನಸಭೆಯ ವಿಧೇಯಗಳನ್ನು ದಿನಾಂಕ 12.2.2004ರಂದು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿದೆಯೆಂದು ತಿಳಿಸಿರುತ್ತಾರೆ.

1. ಕರ್ನಾಟಕ ಧನ ವಿನಿಯೋಗ ವಿಧೇಯಕ, 2004
2. ಕರ್ನಾಟಕ ಧನ ವಿನಿಯೋಗ(ಲೇಖಾನುದಾನ) ವಿಧೇಯಕ, 2004